## 14

# ಪ್ರತಿ ಸಂಗತಿಗೂ ಒಂದು ಪ್ರಥಮ ಸಮಯ

### ಓದುವ ಮನೆಪಾಠ #4

III. ಯೇಸುವಿನ ಸೇವೆಯ ಆರಂಭ (ಮುಂದುವರೆಯುವದು).
- D. (ಯೂದಾಯದಲ್ಲಿನ) ಯೇಸುವಿನ ಪ್ರಥಮ ಶಿಷ್ಯರು (ಯೋಹಾನ 1:35-51).
- E. ಯೇಸುಮಾಡಿದ ಮೊದಲ ಮಹತ್ಕಾರ್ಯ (ಕಾನಾ) (ಯೋಹಾನ 2:1-11).
- F. (ಗಲಿಲಾಯದಲ್ಲಿ) ಯೇಸುವಿನ ಮೊದಲ ಮನೆ (ಯೋಹಾನ 2:12).

IV. ಮೊದಲ ಪಸ್ಕದಿಂದ, ಎರಡನೆಯದು.[1]
- A. ಯೇಸುವಿನ ಸೇವೆಯ ಕಾಲದ ಮೊದಲ ಪಸ್ಕ.
  1. ದೇವಾಲಯದ ಶುದ್ಧತೆ (ಯೋಹಾನ 2:13-25).
  2. ನಿಕೋದೇಮನಿಗೆ ಬೋಧಿಸಿದ್ದು (ಯೋಹಾನ 3:1-21).
- B. ಯೂದಾಯದ ಪ್ರಥಮ ಸೇವೆ (ಯೋಹಾನನ ಸಾಕ್ಷಿ) (ಯೋಹಾನ 3:22-36).

### ಪೀಠಿಕೆ

ಸಕಲ ಸಂಗತಿಗಳಿಗೂ ಒಂದು ಪ್ರಥಮ ಸಮಯವಿದೆ ಎಂಬ ಪ್ರತೀತಿ ಇದೆ. ಯೇಸುವಿನ ಸೇವೆಯಲ್ಲಿ ಉಂಟಾದ ಪ್ರಥಮ ಸಂಗತಿಗಳನ್ನು ಈಗಾಗಲೇ ಧ್ಯಾನ ಮಾಡಿದ್ದು, ಈಗಿನ ಪಾಠದಲ್ಲಿ ಅವುಗಳ ಕುರಿತು ಇನ್ನೂ ಹೆಚ್ಚಾಗಿ ಗಮನಿಸಬಹುದಾಗಿದೆ.

ಯೇಸುವಿನ ಆರಂಭದ ಸೇವೆಯಲ್ಲಿ, ಅನೇಕ ಅಗೋಚರ ಸಂಗತಿಗಳಿದ್ದವು. ಯೇಸುವಿನ ನಂತರದ ಸೇವೆಯಲ್ಲಿ ಉಂಟಾದ ಗಲಿಲಾಯದ ಯಶಸ್ಸಿನ ಕುರಿತು ಸುವಾರ್ತೆಗಳಲ್ಲಿ ತಿಳಿಸಲಾಗಿದೆ. ಯೇಸುವಿನ ಪ್ರಥಮ ಸೇವೆಯಲ್ಲಿ ಉಂಟಾದ ಪ್ರಸಿದ್ಧ ಸಂಗತಿಗಳನ್ನು ನಾವುಗಳು ಅರಿಯಬೇಕೆಂದು ಯೋಹಾನನು ಬಯಸುತ್ತಾನೆ.

### ಮೊದಲನೆಯ ಶಿಷ್ಯರು (ಯೋಹಾನ 1:35-51)

"ಸಮೀಪವಾಯಿತು!" ಎಂಬ ಪಾಠದಲ್ಲಿ, ಸ್ನಾನಿಕನಾದ ಯೋಹಾನನು ನೀಡಿದ ಯೇಸುವಿನ ಕುರಿತಾದ ಸಾಕ್ಷಿಯನ್ನು ಗಮನಿಸಿದೆವು. "ಅಗೋ ದೇವರು ಯಜ್ಞಕ್ಕೆ ನೇಮಿಸಿದ ಕುರಿ ಲೋಕದ ಪಾಪವನ್ನು ನಿವಾರಣೆ ಮಾಡುವವನು!" (ವಚನ 29). ಮರುದಿನ ಯೋಹಾನನು ತನ್ನ ಶಿಷ್ಯಂದಿರಾದ ಸೀಮೋನ ಪೇತ್ರನ ಸಹೋದರನಾದ ಅಂದ್ರೇಯ ನೊಂದಿಗಿದ್ದನು (ವಚನ 40). ಇನ್ನೊಬ್ಬನು ಪ್ರಾಯಶಃ ನಾಲ್ಕನೆಯ ಸುವಾರ್ತೆಯ ಪ್ರಕಾರ ಯೋಹಾನನಿರಬಹುದು.[2] ಈತನು ತನ್ನ ಹೆಸರನ್ನು ಸೂಚಿಸಲು ಇಚ್ಚಿಸದೆ ಇರಬಹುದು.[3]

ಯೇಸು, ಪ್ರಸಂಗಿಯ ಬಳಿ ನಡೆದಾಗ, ಅವನು "ಇಗೋ ದೇವರ ಕುರಿಮರಿ!" ಎಂದಿರಬಹುದು (ವಚನ 36). ಕೂಡಲೇ ಅವನ ಇಬ್ಬರು ಶಿಷ್ಯರು ಯೇಸುವಿನ ಸಂಗಡ ಹೋಗಿ ಒಂದು ದಿವಸ ತಂಗಿದ್ದರು (ವಚನಗಳು 37-39). ಅದು ಹತ್ತನೇ ಗಂಟೆಯ ಸಮಯವಾಗಿತ್ತು (ವಚನ 39). ಯೆಹೂದ್ಯರ ಪ್ರಕಾರ ಅದು 4:00 ಗಂಟೆಯ ಸಮಯ[4] ಅದು ರೋಮಾಯರ ಪ್ರಕಾರ ಮುಂಜಾನೆ 10:00 ಗಂಟೆ[5] ಹೆಸರಿಲ್ಲದ ಶಿಷ್ಯನು ಯೋಹಾನನೇ ಆಗಿದ್ದರಿಂದ, ಸರಿಯಾದ ಸಮಯವನ್ನು ಅವನು ದಾಖಲು ಮಾಡಿರುವನು.

ಅಂದ್ರೆಯನು ಕೆಲವು ತಾಸುಗಳ ಕಾಲ ಯೇಸುವಿನೊಂದಿಗೆ ತಂಗಿದ ನಂತರ ತನ್ನ ಸಹೋದರನಾದ ಸೀಮೋನನನ್ನು ಕಂಡುಕೊಂಡು, ಅವನನ್ನು ಯೇಸುವಿನ ಬಳಿಗೆ ಕರತಂದನು (ವಚನಗಳು 40-42). ಇತರರನ್ನು ಯೇಸುವಿನ ಬಳಿ ತರುವ ವರವನ್ನು ಅಂದ್ರೇಯನು ಹೊಂದಿದ್ದನು (ನೋಡಿರಿ ಯೋಹಾನ 6:8, 9; 12:20-22). ಇಲ್ಲಿ ಅಂದ್ರೇಯನು ಸೀಮೋನನಿಗೆ ಹೇಳಿದ ಮಾತನ್ನು ಗಮನಿಸಿ: "ಮೆಸ್ಸೀಯನು ನಮಗೆ ಸಿಕ್ಕಿದನು" (1:41). ಯೇಸು ಯಾರಾಗಿದ್ದನು ಎಂದು, ಯೇಸುವಿನ ಪ್ರಥಮ ಶಿಷ್ಯರು ಅರಿತುಕೊಂಡಿದ್ದರು (ವಚನಗಳು 45, 49).[6]

ಯೇಸು ಸೀಮೋನನನನ್ನು ಸಂಧಿಸಿದಾಗ, ಅವನನ್ನು "ಕೇಫ"ನು ಅಂದರೆ "ಬಂದೆ" ಎಂದು ಕರೆದನು. ಮೊದಲನೆಯದು ಅರಾಮ್ಯ ಎರಡನೆಯದು ಗ್ರೀಕ್ ಭಾಷೆ ಎರಡರ ಅರ್ಥವು "ಬಂಡೆ" ಎಂಬದೆ. ಯೇಸು ಅವನಲ್ಲಿ ಅಡಗಿದ್ದ ಸಾಮರ್ಥ್ಯವನ್ನು ಅರಿತ ಹಾಗೆ ನಮ್ಮಲ್ಲಿರುವದನ್ನು ಅರಿಯುತ್ತಾನೆ.

ಮರುದಿನ ಯೇಸು ಗಲಿಲಾಯಕ್ಕೆ ಹೊರಡಲು ಸಿದ್ಧನಾದಾಗ, ಫಿಲಿಪ್ಪನನ್ನು ಕರೆದನು. ಪ್ರಾಯಶಃ ಅವನು ಸಹ ಸ್ನಾನಿಕನಾದ ಯೋಹಾನನ ಶಿಷ್ಯನಿರಬಹುದು. ಯೇಸು ಅಂದು ತನ್ನ ಶಿಷ್ಯರನ್ನು ಕರೆದಂತೆ, ಈಗಲೂ ಸಹ "ನನ್ನನ್ನು ಹಿಂಬಾಲಿಸು" ಎಂದು ಕರೆಯುತ್ತಿದ್ದಾನೆ (ವಚನ 43). ತಕ್ಷಣವೇ ಫಲಿಪ್ಪನು ತನ್ನ ಸ್ನೇಹಿತನಾದ ನತಾನಿಯೇಲನನ್ನು ಯೇಸುವಿನ ಬಳಿಗೆ ಕರೆತಂದನು (ವಚನಗಳು 45, 46).

ಯೇಸು ನತಾನಯೇಲಿನ ಸ್ವಭಾವವನ್ನು ಅವನಿಗೆ ತಿಳಿಸಿಕೊಟ್ಟನು (ವಚನಗಳು 47-49). ಯೇಸು ಅವನಿಗೆ, "ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೋಡುವಿ" (ವಚನ 50).[7] ನತಾನಿಯೇಲನು ಯಾರೆಂದು ನಾವು ತಿಳಿಯೆವು, ಆದರೆ ಯೇಸುವಿನ ಹನ್ನೆರಡು ಅಪೋಸ್ತಲರಲ್ಲಿ ಒಬ್ಬನಾದ ಬಾರ್ತಿಲೋಮಾಯನಿರ ಬಹುದು.[8]

ಈ ರೀತಿಯಲ್ಲಿ ಯೇಸು ತನ್ನ ಪ್ರಥಮ ಅನೂಯಾಯಿಗಳನ್ನು ಹೊಂದಿಕೊಂಡನು (ನೋಡಿರಿ 2:2).[9] ಗ್ರೀಕ್ ಭಾಷೆಯ "ಶಿಷ್ಯನು" ಅಂದರೆ "ಕಲಿಯುವವನು" ಎಂಬ ಅರ್ಥ ಒಬ್ಬನಿಂದ ಕಲಿಯುವ ಸಲುವಾಗಿ ಹಿಂಬಾಲಿಸುವವನು. ನಾವೆಲ್ಲರೂ ಆತನ ಶಿಷ್ಯರಾಗ ಬೇಕೆಂದು ಯೇಸು ಬಯಸುತ್ತಾನೆ.[10]

## ಮೊದಲನೆಯ ಅದ್ಭುತ (ಯೋಹಾನ 2:1-11)

ಯೇಸು ಮತ್ತು ಆತನ ಶಿಷ್ಯರು ಉತ್ತರದ ಗಲಿಲಾಯಕ್ಕೆ ಹೊರಟರು. ಮೂರನೇ ದಿನದಲ್ಲಿ ಅವರು ನಜರೇತಿನ ಸಮೀಪವಿದ್ದ ಕಾನ ಊರಿಗೆ ಬಂದರು.[11] ಅದು ನತಾರಿಯೇಲನ ಊರಾಗಿತ್ತು (ಯೋಹಾನ 21:2). ಅವರು ಒಂದು ಮದುವೆಗೆ ಬಂದಿದ್ದರು (2:1, 2). ತಾನು ಯಾರನ್ನು ರಕ್ಷಿಸಬೇಕೆಂದಿದ್ದನು, ಅವರೊಂದಿಗೆ ಯೇಸು ಬೆರೆತ್ತಿದ್ದನು.

ಅಲ್ಲಿ ಯೇಸುವಿನ ತಾಯಿಯಾದ ಮರಿಯಳು ಸಹ ಅಲ್ಲಿದ್ದಳು (ವಚನ 1). ಒಂದು ವೇಳೆ ಆಕೆ ಮದುವೆ ಮನೆಗೆ ಸಹಾಯಮಾಡಲು ಬಂದಿರಬಹುದು (ನೋಡಿರಿ ವಚನಗಳು 3, 5). ಒಂದು ವೇಳೆ ಮದುವೆ ಮನೆಯವರು ಅವರ ಸ್ನೇಹಿತರು ಅಥವಾ ಸಂಬಂಧಿಗಳಿರಬಹುದು.

ಆಚರಣೆಯ ನಡುವೆ, ತಂಪು ಪಾನಿಯ ಕಡಿಮೆಯಾಗಿಬಹುದು. ಆಹ್ವಾನಿತರಿಗಿಂತಲೂ ಹೆಚ್ಚಾದ ಜನರು ಬಂದಿರಬಹುದು. ಹೇಗೂ ಅದು ಅವಮಾನ ಬರಿಸುವಂಥ ಪರಿಸ್ಥಿತಿಯಾಗಿರಬಹುದು. ಆಗ ಮರಿಯಳು ತನ್ನ ಮಗನ ಬಳಿಗೆ ಬಂದು "ದ್ರಾಕ್ಷಾರಸ ಮುಗಿದು ಹೋಗಿದೆ" ಎಂದು ಹೇಳಿದಳು (ವಚನ 3). ಆತನಿಂದ ಅವಳು ಏನನ್ನು ಬಯಸಿದ್ದಳು ಎಂಬದನ್ನು ಅರಿಯೆವು; ಯಾಕೆಂದರೆ ಆತನು ಈ ಹಿಂದೆ ಯಾವದೇ ಅದ್ಭುತ ಗಳನ್ನು ಮಾಡಿರಲಿಲ್ಲ (ವಚನ 11). ಆದರೆ ಆತನು ಅದ್ಭುತ ಮಾಡುವವನು ಎಂದು ಅರಿತು ಆಕೆ ಆತನ ಮೇಲೆ ಅನೇಕ ವರ್ಷಗಳಿಂದ ಭರವಸವಿಟ್ಟಿದ್ದಳು.

ಆದರೆ ಯೇಸು ಆಕೆಗೆ ಉತ್ತರಿಸಿ: "ಅಮ್ಮಾ, ನನ್ನ ಗೊಡವೆ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ"[12] (ವಚನ 4). ಆ ಸಮಾಜದಲ್ಲಿ ತಾಯಿಯನ್ನು "ಸ್ತ್ರೀ" ಎಂದು ಕರೆಯುವದು ಅಪವಾದವಲ್ಲ.[13] (ನಂತರ ಇದನ್ನು ಮೃದು ಹೇಳಿಕೆ ಎನ್ನಲಾಗಿದೆ [ಯೋಹಾನ 19:26].) ಹೇಗೂ, ಯೇಸುವಿನ ಈ ಹೇಳಿಕೆ ಸ್ವಲ್ಪ ಅಲಕ್ಷ್ಯದ ಗುರುತನ್ನು ಹೊಂದಿದೆ. ಅರ್ನೆಸ್ಟ್ ಹೌಸರ್ ಪ್ರಕಾರ, "ಯೇಸು ಆಕೆಯ ಮಗನೇ ಆಗಿದ್ದರೂ, ಅವನು ಆಕೆಗೆ ಸೇರಿದವ ನಾಗಿರಲಿಲ್ಲ" ಎಂದು ಬರೆದಿರುವರು. ಇಂದಿನಿಂದ ಆಕೆಯೊಂದಿಗಿನ ಯೇಸುವಿನ ಸಂಬಂಧ ಮೊಟಕಾಯಿತು ಎಂಬದು ಹೌಸರ್‌ರವರ ಹೇಳಿಕೆ.[14]

ಮರಿಯಳು ಮನಗುಂದಲಿಲ್ಲ. ಆಕೆಯು ಸೇವಕರಿಗೆ, "ಆತನು ನಿಮಗೆ ಏನು ಹೇಳು ವನೋ ಅದನ್ನು ಮಾಡಿರಿ ಅಂದಳು" (ವಚನ 5) - ಈ ಸಲಹೆಯ ಒಳ್ಳೆಯದೇ! ಈ ಅದ್ಭುತದ ಮೂಲಕ ಯೇಸು ಜನರ ಸಮಯವನ್ನು ಹೊರತುಪಡಿಸಿ, ತನ್ನ ಸಮಯದಲ್ಲಿ ಮಾತ್ರ ಮಾಡುತ್ತಿದ್ದನು ಎಂಬ ಸೂಚನೆಯನ್ನು ತಿಳಿಸಿರುವನು (ಒಳ್ಳೆಯದನ್ನು ಮಾಡಲು) (ಆತನ ಮರಣದ ಸಮಯದ ಕುರಿತಾಗಿಯೂ), ಅದ್ಭುತ ಹೇಗಾಯಿತೆಂದು ಸೇವಕರು ಮಾತ್ರ ತಿಳಿದಿದ್ದರು. ನಂತರ, ಆತನ್ನು ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದ ಈ ಮಹಾ ಅದ್ಭುತ ಕಾರ್ಯವನ್ನು ಮಾಡಿದನು (ವಚನಗಳು 6-10).

ಈ ವಿಧವಾದ ಕುಡಿತವನ್ನು ಯೇಸು ಏಕೆ ಪ್ರೋತ್ಸಾಹಿಸಿದನು ಎಂಬುದರಲ್ಲಿ ಗೊಂದಲವಿರುತ್ತದೆ. ಏಕೆಂದರೆ ವಚನ 10ರಲ್ಲಿ "ದ್ರಾಕ್ಷರಸ" ಎಂದಿದೆ. ಹಾಗೆಯೇ ಯೇಸು 120 ರಿಂದ 180 ಗ್ಯಾಲನ್‌ಗಳಷ್ಟು ದ್ರಾಕ್ಷಾರಸವನ್ನು ಸರಭರಾಜು ಮಾಡಿದ್ದನು.[15] ಒಂದು ವೇಳೆ ದ್ರಾಕ್ಷಾರಸವು ಅಮಲು ತರುವಂಥದ್ದಾಗಿದ್ದರೆ,[16] ಯೇಸು ಕುಡಿತವನ್ನು ಪ್ರೋತ್ಸಾಹಿಸುವವನಾಗಿದ್ದನೇ? ಯಾಕಂದರೆ ಸತ್ಯವೇದವು ಅದನ್ನು ಖಂಡಿಸುತ್ತದೆ (ಜ್ಞಾನೋಕ್ತಿ 20:1; ಗಲಾತ್ಯ 5:21). ಅದನ್ನು ಸ್ಪಷ್ಟಪಡಿಸುವ ಪಾಠವು ಇದಾಗಿಲ್ಲದಿದ್ದರೂ[17] "ವೈನ್" (*oinos*) ಎಂಬುದು ಗ್ರೀಕ್ ಪದವಾಗಿದ್ದು "ಅದು ದ್ರಾಕ್ಷೆಯ ತಾಜ ರಸ" ಎಂಬ ಅರ್ಥವಾಗಿದೆ. ಹಳೆ ಒಡಂಬಡಿಕೆಯಲ್ಲಿ[18] ಇದನ್ನು ಬಳಸುತ್ತಿದ್ದರು (ಯೆಶಾಯ 65:8).

ಈ ವಾಕ್ಯದಲ್ಲಿರುವ ಪ್ರಮುಖ ಅಂಶವನ್ನು ಇಂಥಹ ಗೊಂದಲಗಳು ಮರೆಮಾಡುತ್ತವೆ: ಆದರೆ ಯೇಸು ಈ ಚಿಕ್ಕ ಹಳ್ಳಿಯಲ್ಲಿ ಒಂದು ಆತ್ಮೀಕ ಅದ್ಭುತ ಕಾರ್ಯವನ್ನು ನೆರವೇರಿ ಸಿದ್ದನು, ಇದು ಆತನು ಮಾಡಿದ ಪ್ರಥಮ ಅದ್ಭುತವಾಗಿತ್ತು!

ಈ ದಿಗಳಲ್ಲಿ "ಅಸಾಧ್ಯವಾದ ಸಂಗತಿಗಳು" ಜರುಗುವಾಗ ಅದನ್ನು ನಾವು ಅದ್ಭುತ ಎಂದು ಕರೆಯುತ್ತೇವೆ. ಅತಿಶಯ ಕಾರ್ಯಗಳನ್ನು ಸತ್ಯವೇದವು ವಿಶೇಷ ಎಂದು ಪರಿಗಣಿಸುತ್ತದೆ. ಯೇಸು ತನ್ನ ಮೂವತ್ತು ವರ್ಷಗಳ ಕಾಲಾವಧಿಯ ನಂತರ ಒಂದು ವಿಶೇಷವಾದ ಅದ್ಭುತವನ್ನು ಪ್ರಥಮವಾಗಿ ಮಾಡಿದ್ದನು. ಯೇಸು ಮೊದಲ ಬಾರಿಗೆ ತನ್ನ *ಅತಿಶಯವಾದ* ಶಕ್ತಿಯನ್ನು ಪ್ರಯೋಗಿಸಿದ್ದನು. ನಾವು ಸಹಜವಾದ ಲೋಕದಲ್ಲಿ ಜೀವಿ ಸುತ್ತಿರುವದರಿಂದ, ಅತಿಶಯವಾದ ಕಾರ್ಯಗಳನ್ನು ವಿವರಿಸುವದು ಅಸಾಧ್ಯವಾ ಗುತ್ತದೆ. ಸತ್ಯವೇದ ಹೇಳುವದನ್ನು ನಾವುಗಳು ನಂಬಿಕೆಯಿಂದ ಒಪ್ಪುತ್ತೇವೆ.

ಈ ಘಟನೆಯ ಮಹತ್ವವನ್ನು ಯೋಹಾನನು ಮರೆಯಲಿಲ್ಲ. ಆತನು ಅದ್ಭುತದ ಕುರಿತು ವಿಶೇಷಪದವನ್ನು ಬಳಸಿದನು: "ಅದೇನಂದರೆ ಸಂಕೇತ"[19] (ವಚನ 11ಎ). ದೇವರಿಂದ ಬಂದು "ಸಂಕೇತ"ವನ್ನು ಯೇಸು ಮಾಡಿದ್ದನು. ಅಂದರೆ ಯೇಸು ತನ್ನ ಮಹಿಮೆಯನ್ನು ಪ್ರಕಟಪಡಿಸಿದ್ದನು (ವಚನ 11ಎ)! ಆತನ ಮುಂದೆ ಮೊದಲಿದ್ದ ಅದ್ಭುತಗಳ ಮುನ್ಸೂಚನೆ ಈ ಮೊದಲ "ಸೂಚನೆಯ" ಮೂಲಕ, ಆತನ ಶಿಷ್ಯರು "ಆತನನ್ನು ನಂಬಿದರು" (ವಚನ 11ಬಿ). ಮೆಸ್ಸೀಯನಲ್ಲಿದ ಅವರ ನಂಬಿಕೆ ವೃದ್ಧಿಯಾಯಿತು!

## ಕಪೆರ್ನೌಮಿಯ ಮೊದಲ ಮನೆ (ಯೋಹಾನ 2:12)

ಕಾನಾದಿಂದ ಯೇಸು ಉತ್ತರಕ್ಕೆ ಪ್ರಯಾಣ ಮಾಡಿದನು.[20] "ಇದಾದ ಮೇಲೆ ಆತನೂ ಆತನ ತಾಯಿಯೂ, ತಮ್ಮಂದಿರು, ಆತನ ಶಿಷ್ಯರೂ ಘಟ್ಟಾ ಇಳಿದು ಕಪೆರ್ನೌಮಿಗೆ ಹೋಗಿ ಅಲ್ಲಿ ಕೆಲವು ದಿವಸ ಇದ್ದರು" (ವಚನ 12). ಕಪೆರ್ನೌಮ್ ಬೆತ್ಸಾಯದಿಂದ ದೂರವಿರದ, ಗಲಿಲಾಯ ಸಮುದ್ರದ ಬಳಿಯ ವ್ಯಾಪಾರ ಕೇಂದ್ರವಾಗಿತ್ತು. ಅದು ಪೇತ್ರ ಯೋಹಾನರ ಸ್ವಂತ ಊರಾಗಿತ್ತು (ಯೋಹಾನ 1:44).[21] ಅದು ಪಾಲಿಸ್ತೇನಿನ ಹೆದ್ದಾರಿಯಲ್ಲಿತ್ತು. ನಂತರ ಅದು ಯೇಸುವಿನ ಕಾರ್ಯಸ್ಥಳವಾಯಿತು (ಮತ್ತಾಯ 4:13).

## ಮೊದಲ ಪಸ್ಕ (ಯೋಹಾನ 2:13-25)

ಯೇಸು ಈಗ ಕಪೆರ್ನೌಮಿನಿಂದ, ಪಸ್ಕದ ಹಬ್ಬಕ್ಕಾಗಿ ಹೋದನು.[22] ಆತನು ಹನ್ನೆರಡು ವರ್ಷದವನಾದಾಗಿನಿಂದ ತಪ್ಪದೆ ಹಬ್ಬಕ್ಕೆ ಹೋದನು ಎಂದು ಅರಿಯುತ್ತೇವೆ (ಲೂಕ 2:41, 42). ಯೇಸುವಿನ ಸಾರ್ವಾಜನಿಕ ಸೇವೆಯ ಮೊದಲ ಪಸ್ಕ ಹಬ್ಬ ಇದಾಗಿತ್ತು.[23] ಹಾಗೂ ಯೇಸು ಪ್ರಥಮವಾಗಿ ಇಲ್ಲಿ ಸಾರ್ವಜನಿಕರಿಗೆ ಕಾಣಿಸಿಕೊಂಡನು. ವಿಶೇಷ ರೀತಿಯಲ್ಲಿ ದೇವಾಲಯವನ್ನು ಪ್ರಥಮ ಬಾರಿ ಶುದ್ಧ ಮಾಡಿದನು.[24] ಯೆಹೂದ್ಯರ ವಿಶೇಷ ಹಬ್ಬದ ದಿನಗಳಲ್ಲಿ ವ್ಯಾಪಾರ ಮಾಡುವದಕ್ಕಾಗಿ ಯೆಹೂದ್ಯರ ವಿವಿಧ ಸ್ಥಳಗಳಿಂದ ಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 2:5, 9-11ಎ). ಪ್ರತಿ ಯೆಹೂದ್ಯರು ವಾರ್ಷಿಕ ಸುಂಕವಾಗಿ ಅರ್ಧ ಆಣೆಯನ್ನು[25] ನೀಡಬೇಕಿತ್ತು. ಅದನ್ನು ಅವರು ವಿದೇಶಿ ವಿನಿಮಯ ಮಾಡಬಾರದಿತ್ತು, ಆದ್ದರಿಂದ ಹಣ ಬದಲಾಯಿಸುವವರ ಅಗತ್ಯವಿತ್ತು. ಹಬ್ಬದ ದಿನಗಳಲ್ಲಿ ಪ್ರತಿ ಯೆಹೂದ್ಯನು ಪ್ರಾಣಿ ಯಜ್ಞವನ್ನು ಸಮರ್ಪಿಸಬೇಕಿತ್ತು.[26] ದೂರದಿಂದ ಬಂದವರಲ್ಲಿ ಅನೇಕರು ಪ್ರಾಣಿಗಳನ್ನು ತರುವದು ಅಸಾಧ್ಯವಾ ದ್ದರಿಂದ ದೇವಾಲಯದ ಬಳಿಯಲ್ಲಿ ಮಾರುತ್ತಿದ್ದವರಿಂದ ಪ್ರಾಣಿಗಳನ್ನು ಕೊಂಡುಕೊಳ್ಳ ಬೇಕಿತ್ತು. ಈ ವ್ಯವಹಾರವನ್ನು ಅನೇಕ ಅನ್ಯರು ಮಾಡುತ್ತಿದ್ದರು.[27] ಪ್ರಪಂಚದ ಪ್ರಯಾಣಿಕರಿಗೆ ಇವರ ಸಹಕಾರ ಅಗತ್ಯವಿದ್ದರಿಂದ, ಯಾಜಕರು ಇವರ ಮೂಲಕ ವ್ಯವಹಾರ ಮಾಡುತ್ತಿದ್ದರು.

ಯೇಸು ತನ್ನ ಸೇವೆಯ ಆರಂಭದಲ್ಲೇ, ದೇವರ ಮತ್ತು ದೇವಾಲಯದ ಮೇಲಿನ ಮಮತೆಯನ್ನು ಪ್ರದರ್ಶಿಸಿದನು. ಆತನು ಆ ವ್ಯಾಪಾರಿಗಳನ್ನು ಓಡಿಸುವಾಗ, "ನನ್ನ ತಂದೆಯ ಮನೆಯನ್ನು ವ್ಯಾಪಾರ ಕೇಂದ್ರವನ್ನಾಗಿ ಮಾಡಬೇಡಿರಿ" ಅಂದನು (ವಚನ 16ಬಿ). ಇಂಥಹ ಇನ್ನೊಂದು ಸಂದರ್ಭದಲ್ಲಿ, "ನನ್ನ ಆಲಯವು ಪ್ರಾಥನಾಲಯವೆನ್ನಿ ಸಿಕೊಳ್ಳುವದು, ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ" ಎಂದು ಹೇಳಿದನು (ಮತ್ತಾಯ 21:13).

ದೇವರು ಯೇಸುವಿಗೆ ನೀಡಿದ ದೈವೀಕ ಅಧಿಕಾರವನ್ನು ಸಹ ಯೇಸು ಪ್ರಥಮ ಬಾರಿಗೆ ಪ್ರಕಟಿಸಿದನು (ಮತ್ತಾಯ 3:17; ನೋಡಿರಿ ಮತ್ತಾಯ 7:29). ಕೋಪ ಗೊಂಡ ದೇವಾಲ ಯದ ಅಧಿಕಾರಿಗಳು ಯೇಸುವಿನ ಅಧಿಕಾರವನ್ನು ಪ್ರಶ್ನಿಸಿದರು. ನ್ಯೂ ಲಿವಿಂಗ್ ಟ್ರಾನ್ಸ್‌ಲೇಟ್ ನಲ್ಲಿ ಯೋಹಾನ 2:18ರಲ್ಲಿ, "ಯೆಹೂದ್ಯ ನಾಯಕರು ಆತನಿಗೆ ಈ ಸಂಗತಿಗಳನ್ನು ಮಾಡಲು ನೀನು ಯಾವ ಅಧಿಕಾರವನ್ನು ಹೊಂದಿರುವಿ? ನೀನು ಅಧಿಕಾರವನ್ನು ಹೊಂದಿರುವದಾದರೆ, ಒಂದು ಸೂಚಕಕಾರ್ಯವನ್ನು ತೋರಿಸು, ಅಂದರು."

ನೋಡಿ, ನಂಬುತ್ತೇವೆ ಎಂದು ಹೇಳುವವರಿಗಾಗಿ, ತನ್ನ ಸೇವಾ ಅವಧಿಯಲ್ಲಿ ಅನೇಕ ಕಾರ್ಯಗಳನ್ನು ಯೇಸು ಮಾಡಿ ತೋರಿಸಿದನು (ನೋಡಿರಿ ವಚನ 23), ಆದರೆ ಆತನ ಪುನರುತ್ಥಾನವು ಅತಿಶಯವಾದ ಅದ್ಭುತವಾಗಿದೆ (ರೋಮಾಪುರ 1:4). ಆತನು ಉತ್ತರಿಸಿ "ಈ ದೇವಾಲಯವನ್ನು ಕೆಡವಿ;[28] ನಾನು ಮೂರು ದಿನದಲ್ಲಿ ಎಬ್ಬಿಸುವೆನು" (ಯೋಹಾನ 219). ಆತನು ತನ್ನ ದೇಹದ ಬಗ್ಗೆ ಮಾತನಾಡುತ್ತಿದ್ದನು (ವಚನ 21). ಆದರೆ ಆತನ ವೈರಿ

ಗಳು ಆತನನ್ನು ಅಪಾರ್ಥ ಮಾಡಿಕೊಂಡರು (ವಚನ 20[29]), ಅವರು ಕೇವಲ ನಾಶವಾಗುವ ಛಿನ್ನ ಹಾಗೂ ಸಂಗಮರಿ ಕಲ್ಲುಗಳ ಬಗ್ಗೆ ಮಾತ್ರ ಯೋಚಿಸುತ್ತಿದ್ದರು.[30]

ಯೇಸು ಯೆರೂಸಲೇಮಿನಲ್ಲಿರುವಾಗ, ಆತನು ಸಾರ್ವತ್ರಿಕ ಅದ್ಭುತವನ್ನು ಮಾಡಿದನು (ವಚನ 23). ಆ ಅದ್ಭುತಗಳ ವಿವರಣೆ ಲಭ್ಯವಿಲ್ಲದೆ ಇರವದಿಂದ, ಅವರು ಸ್ವಸ್ಥೆತೆಯನ್ನು ಪರಿಣಿಸುತ್ತಿದ್ದರು (ಮತ್ತಾಯ 4:23).[31] ಆತನನ್ನು ನಂಬಿದವರ ಸಂಖ್ಯೆ ಹೆಚ್ಚಾಗುತ್ತಾ ಬಂತು (ಯೋಹಾನ 2:23), ಆದರೆ ಯೇಸು ಅವನ ಆದರದ ನಂಬಿಕೆಯನ್ನು ಗಮನಿಸುವವನಾಗಿದ್ದನು (ವಚನಗಳು 24, 25). ಲಿವಿಂಗ್ ಬೈಲ್‌ನ ವಚನ 25ರಂತೆ, "ಮನುಷ್ಯನ ಬದಲಾಗುವ ಸ್ವಭಾವದ ಕುರಿತು ಯಾರೂ ಆತನಿಗೆ ಹೇಳುವ ಅಗತ್ಯವಿಲ್ಲ!"

## ಮೊದಲ ಪ್ರಸಂಗ (ಯೋಹಾನ 3:1-21)

ಯೇಸು ಯೆರೂಸಲೇಮಿನಲ್ಲಿರುವಾಗ, "ಯೆಹೂದ್ಯರ"[32] ಹಿರೀ ಸಭೆಯವನಾದ ನಿಕೋದೇಮನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದನು (ವಚನಗಳು 1, 2). ಅವನ ಹೃದಯದಲ್ಲಿ ಗಾಬರಿ (ಯೋಹಾನ 19:39) ಇದ್ದದರಿಂದ ಅವನು ರಾತ್ರಿ ವೇಳೆ ... ಬಂದಿರಬಹುದು.[33] ಅವನು ಯೇಸು ಮಾಡಿದ ಅದ್ಬುತದಿಂದ ಪ್ರಭಾವಿತನಾಗಿದ್ದನು (2:23). ಅವನು ಯೇಸುವಿಗೆ "ಗುರುವೇ,[34] ನೀನು ದೇವರ ಕಡೆಯಿಂದ ಬೋಧಕನೆಂದು ಬಲ್ಲೆನು; ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು ಎಂದು ಹೇಳಿದನು" (3:2).

ಮನುಷ್ಯರ ಆಲೋಚನೆಗಳನ್ನು ಗ್ರಹಿಸುವಂಥ ಯೇಸುವು ನಿಕೋದೇಮ ಬರುವಿಕೆಯನ್ನು ಅರಿತುಕೊಂಡನು (2:24, 25). ಮೆಸ್ಸೀಯನ ರಾಜ್ಯದ ಕುರಿತಾದ ಪ್ರಶ್ನೆಯನ್ನು ಈ ಯೆಹೂದ್ಯ ನಾಯಕನು ಹೊಂದಿದ್ದನು. ಯೆಹೂದ್ಯರಂತೆ ಇವನೂ ಸಹ ದೇವ ರಾಜ್ಯದ ಕುರಿತು ಗೊಂದಲಕ್ಕೊಳಗಾಗಿದ್ದನು. ಅದಕ್ಕೆ ಯೇಸು, ನಾನು ನಿನಗೆ "ನಿಜ, ನಿಜವಾಗಿ[35] ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು" (3:3).

ಯೇಸುವಿನ ಶಿಷ್ಯನಾದವನು ಒಂದು ವಿಶೇಷವಾದ ಪರಿವರ್ತನೆಯನ್ನು ಹೊಂದಿರುತ್ತಾನೆ, ಅದನ್ನು ಅವನು ಹೊಸದಾಗಿ ಹುಟ್ಟುವದರಿಂದ ಪಡೆಯುತ್ತಾನೆ. ಇದರಿಂದ ಯೇಸು ಶಿಷ್ಯರ ಪರಿಸ್ಥಿತಿಯನ್ನು ಖಂಡಿಸುತ್ತಿರುವದಿಲ್ಲ.[36] ಸಭೆಯು ಸಂಸ್ಥಾಪನೆ ಗೊಂಡಂಡಿನಿಂದ ಕ್ರೈಸ್ತನಾಗುವದಕ್ಕೆ ಹೊಸದಾಗಿ ಹುಟ್ಟುವ ಬಗ್ಗೆ ಯಾರೂ ಮಾತನಾಡಿರುವದಿಲ್ಲ. ಆದರೆ ಒಬ್ಬನು ನಂಬಿ ಮಾನಸಾಂತರಪಟ್ಟು, ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 2:37, 38; 22:16).[37]

ಇಲ್ಲಿ ಯೇಸು ಮೆಸ್ಸೀಯನ ರಾಜ್ಯದ ಕುರಿತು ಒತ್ತಿ ಹೇಳುತ್ತಿದ್ದು: ಲೌಕಿಕವಾಗಿ ಹುಟ್ಟಿದ ಲೋಕವಲ್ಲ (ಇಸ್ರಾಯೇಲ್ ರಾಜ್ಯ ಸಂಸ್ಥಾಪನೆಯಂತಲ್ಲ) ಪರಲೋಕದ ಜನನದಿಂದ, ಪರಲೋಕವನ್ನು ಹೊಂದಿದಂತೆ (ಗುಣದ ಬದಲಾವಣೆ), ಅದು ಸೈನಿಕರರಿರುವ ರಾಜ್ಯ ದಂತಿರದೆ, ದೇವರ ಆತ್ಮನಿಂದಾಗುವ ರಾಜ್ಯ (ವಚನಗಳು 6-8[38]). ಈ ಮಾತುಗಳು ಕಠಿಣ ವಾದ್ದರಿಂದ, ನಿಕೋದೇಮನು ಅರಿಯಲು ಅಸಾಧ್ಯವಾಯಿತು (ವಚನಗಳು 4, 10).

ಯೋಹಾನನ ಸಂದೇಶಕ್ಕಿಂತಲೂ, ಯೇಸುವಿನ ಸಂದೇಶವು ವಿಭಿನ್ನವಾಯಿತು. ಮುಂದುವರೆದ ಈ ತರ್ಕವು ಯೇಸುವಿನದೋ ಅಥವಾ ಯೋಹಾನನದೋ ಎಂಬುದು ತಿಳಿಯದಾಗಿದೆ.[39] ಹೇಗಿದ್ದರೂ ಈ ತರ್ಕದಲ್ಲಿ ಸತ್ಯವಿರುತ್ತದೆ - ಹೌದು ಯೇಸು ಕ್ರೂಜಿಯ ಮೇಲೆ ಎತ್ತಲ್ಪಟ್ಟು (ವಚನ 14). ಆತನನ್ನು ನಂಬುವದು ಅತಿ ಅಗತ್ಯವಾಗಿದೆ (ಮಸ್ಸಿಯ) (ವಚನಗಳು 15, 16, 18).

ಈ ಅಧ್ಯಾಯದಲ್ಲಿ, "ಅತಿ ಪ್ರಮುಖವಾದ" ಯೋಹಾನ 3:16ರ ವಾಕ್ಯಭಾಗ ಅಡಕವಾ

ಗಿದೆ. "ಅದು ರಕ್ಷಣೆಗೆ ಅಗತ್ಯವಿರುವದನ್ನೆಲ್ಲಾವನ್ನು ಪೂರೈಸದೆ ಇದ್ದರೂ, ದೇವರ ಪ್ರೀತಿಯ ಬಗ್ಗೆ ಇರುವ ಸುಂದರ ಹಾಗೂ ಬಲವುಳ್ಳ ಹೇಳಿಕೆಯಾಗಿದೆ."

## ಯುದಾಯದಲ್ಲಿನ ಮೊದಲ ಸೇವೆ[40] (ಯೋಹಾನ 3:22-36)

ಯೆರೂಸಲೇಮಿನ ಹಬ್ಬದ ನಂತರ, ಯೇಸು ಮತ್ತು ಆತನ ಶಿಷ್ಯರು ಪ್ರಸಂಗಿಸುವದಕ್ಕಾಗಿ ಯೂದಾಯದ ಹಳ್ಳಿಗಳಿಗೆ ಹೋದರು. ಅವರು ಅಲ್ಲಿ ಮೂರರಿಂದ ಎಂಟು ತಿಂಗಳ ಕಾಲ ಸೇವೆ ಮಾಡಿರಬಹುದು. ಈ ಕಾಲದಲ್ಲಿ ಯೇಸು ಎರಡು ಸಂಗತಿಗಳನ್ನು ಮಾಡಿದನು. ಮೊದಲು "ತನ್ನ ಶಿಷ್ಯರೊಂದಿಗೆ ಸಮಯ ಕಳೆದನು" ಅವರಿಗೆ ಬೋಧಿಸಿ, ತನ್ನನ್ನು ಅರಿಯುವಂತೆ ಮಾಡಿಕೊಂಡನು. ಎರಡನೆಯದಾಗಿ ಆತನ ಮುಂದಾಗಿ ಹೋಗಿ ಸೇವೆ ಮಾಡಿದ ಸ್ನಾನಿಕನಾದ ಯೋಹಾನನಂತೆ (ವಚನ 22) ದೀಕ್ಷಾಸ್ನಾನ ಮಾಡಿಸುತ್ತಿದ್ದನು.[41]

ಯುದಾಯದ ಸೇವೆಯು ಯಶಸ್ಸನ್ನು ಕಂಡಿತು, ಆಗ ಯೋಹಾನನ ಶಿಷ್ಯರು, "ಇಗೋ ತನ್ನ ಬಳಿಗೆ ಬರುವರಿಗೆ ಈತನು ದೀಕ್ಷಾಸ್ನಾನ ಮಾಡಿಸುತ್ತಿರುವನು" ಎಂದು ದೂರು ನೀಡಿದರು (ವಚನ 26). ಮುಂದಿನ ವಚನದಲ್ಲಿ (4:1, 2) ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದನು ಎಂದು ಗಮನಿಸುತ್ತೇವೆ.

ಸ್ನಾನಿಕನಾದ ಯೋಹಾನನು ಇದನ್ನು ಒಪ್ಪಿಕೊಂಡನು, ಆದರೆ ಅವನ ಶಿಷ್ಯರು ಇದನ್ನು ಸ್ವಾಗತಿಸಲಿಲ್ಲ (ವಚನ 26). ಅಸೂಯೆಯು ದೇವರ ಸೇವೆಗೆ ಮಹಾ ಕಂಟಕವಾಗಿದೆ.

ಯೋಹಾನನ ಶಿಷ್ಯರ ದೂರಿನ ನಿಮಿತ್ತವಾಗಿ, ಅವನು ಯೇಸುವಿನ ಬಗ್ಗೆ ಪುನಃ ಸಾಕ್ಷಿ ನೀಡಬೇಕಾಯಿತು (ವಚನಗಳು 27-35). ಯೇಸುವೇ "ಮೆಸ್ಸೀಯನೆಂದು" ನಂಬುವದು ಪ್ರಮುಖವಾಗಿದೆ ಅಂದನು:[42] ಮಗನಲ್ಲಿ ನಂಬಿಕೆ ಇಡುವವನು ನಿತ್ಯಜೀವ ಹೊಂದಿದ್ದಾನೆ. ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು (ವಚನ 36). ನಂಬಿಕೆ ಹಾಗೂ ವಿಧೇಯತೆಯ ನಡುವೆ ಇರುವ ಸಂಬಂಧವನ್ನು ಗಮನಿಸಿ.[43] ವಿಧೇಯತೆಯ ನಂಬಿಕೆ ರಕ್ಷಿಸುತ್ತದೆ (ಯಾಕೋಬ 2:20; ರೋಮಾಪುರ 1:5; 16:26).

ಯೋಹಾನನು ತನ್ನ ಪಾತ್ರವನ್ನು ನಿರ್ವಹಿಸಿ (ವಚನಗಳು 28, 29). ವಾಕ್ಯದಲ್ಲಿರುವ ಒಂದು ಉನ್ನತವಾದ ಹೇಳಿಕೆಯನ್ನು ನೀಡಿದನು: ಆತನು ವೃದ್ಧಿಯಾಗಬೇಕು, ನಾನು ಕಡಿಮೆಯಾಗಬೇಕು (ವಚನ 30). ನೀವೇ ಯಾರೇ ಆಗಿದ್ದರೂ, ಒಂದು ದಿವಸ ನಿಮ್ಮ ಸ್ಥಾನವನ್ನು ಮೊತ್ತಬ್ಬರಿಗೆ ದಿಟ್ಟುಕೊಡಲೇಬೇಕು. ನಾವುಗಳು ದೀನತೆಯಿಂದ "ಆತನು ವೃದ್ಧಿಯಾಗಲೇ ನಾನು ಕಡಿಮೆಯಾಗಲೀ" ಎಂದು ಹೇಳ ಬೇಕಲ್ಲವೇ.

## ಮುಕ್ತಾಯ

ಕೆಲವರು, "ನಾನು ಅದನ್ನು ಮಾಡಲೇ ಇಲ್ಲ" ಎಂದು ಹೇಳುತ್ತಾರೆ. ಈ ರೀತಿ ಹೇಳುವದಾದರೆ, ನಾವು ಏನನ್ನು ಸಾಧಿಸಲು ಸಾಧ್ಯವಾಗುವದಿಲ್ಲ. ಒಂದು ಮಗು ಮೊದಲ ಹೆಜ್ಜೆಯನ್ನು ಇಡದೆ ನಡೆಯಲಾರದು. ಮೊದಲ ಪದವನ್ನು ಹೇಳದೆ, ಮಾತನಾಡಲಾರದು. ಅದು ಕಲಿಯಲು ಸಾಧ್ಯವೇ ಇಲ್ಲ. ಸ್ತ್ರೀ ಪುರುಷರು ಸಹ ಹೊಸ ಕಲೆಯನ್ನು ಕಲಿಯಲಾರರು. ತಂದೆತಾಯಿಗಳು ಮಕ್ಕಳನ್ನು ಹೊಂದಲಾರರು. ಎಲ್ಲದಕ್ಕೂ ಮೊದಲ ಸಮಯವಿದೆ ಎಂದು ನೆನಪಿಸಿಕೊಳ್ಳಿರಿ. ಹೊಸ ಕೆಲಸಮಾಡಲು ಪ್ರಯತ್ನಿಸಿರಿ, ಅದು ನಿಮಗೆ ಆಶ್ಚರ್ಯ ಉಂಟು ಮಾಡುತ್ತದೆ!

ಟಿಪ್ಪಣೆಗಳು

[1]ಯೋಹಾನ 5:1ರಲ್ಲಿನ "ಹಬ್ಬವನ್ನು" ಈ ಪಾಠವು ಪಸ್ಕ ಎಂದು ಪ್ರಸ್ತಾಪಿಸಲಾಗಿದೆ. [2]ಇದು ಯೊಹಾನನು ಎನುವುದಕೆ ಬಹಳ ಕಾರಣಗಳಿವೆ: (1) ಕೊಟ್ಟಿರುವ ವಿವರಗಳು ಸಾಕ್ಷಿಗಳಿಂದಲೂ ತಿಳಿದು ಬಂದಿದೆ, (2) ತನ್ನ ಹೆಸರು ಮರೆಯಾಗಿರುವುದು ಯೋಹಾನನನಿಗೇ ವಾಡಿಕೆ, (3) ಇವನು ಯೋಹಾನನು ಅಲದಿದ್ದರೇ ತಾನು ಕರೆಯಲ್ಪಡುವುದಕ್ಕೆ ಆತನು ಯಾವ ವಿವರಣೆ ಕೊಡುವುದಿಲ್ಲ, [3]ಏಳು ಇತರ ಸಂದರ್ಭದಲ್ಲಿ ಆತನು ತಾನು ಹೆಸರನ್ನು ಮರೆಮಾಡಿಕೊಡಿದ್ದಾನೆ (ಯೋಹಾನ 13:23; 19:26, 35; 20:2-8; 21:7, 20, 24), [4]ಯೋಹೂದ್ಯರು ಸೂರ್ಯಥಯದಿಂದ ಆಸ್ತಮದ ವರೆಗೆ ಅಸ್ತಮದಿಂದ ಬೆಳೆಗ್ಗೆಯವರೆ ಗೆ ಕಾಲವನ್ನು ಲೆಕ್ಕಿಸಿದ್ದಾರೆ. [5]ಯೆರೂಸಲೇಮ ನಾಶವಾದ ನಂತರ ಬಹಳ ಕಾಲಕ್ಕೆ ಇದು ಬರೆಯಲ್ಪಟದವಲಿಂದ ನಂತರ ಯೋಹಾನನು ರೋಮನ್ನರ ಕಾಲವನ್ನು ಉಪಯೋಗಿಸಿದಲಿಂದ (ಯೋಹಾನ 20:19) ಉದ್ದೇಶಿಸಲ್ಪಟ್ಟ ಸಮಯ ಬೆಳಿಗ್ಗೆ 10:00 ಗಂಟೆ ಎಂದು ಅನೇಕರು ಭಾವಿಸುತಾರೆ. [6]ಸೂಚಿಸಲ್ಪಟ ವಿವರಗಳೆನ್ನೆಲ್ಲ ಅವರು ಗ್ರಹಿಸಿದೆ ಹೋದರು, ಆತನು ಮೇಸ್ಸಿಯನ ಕುಲಿತ ಹಳೆ ಒಡಂಬಡಿಕೆಯ ನೇರವೇಲಿಸುವವನಾದನೆಂದು ಅವರು ತಿಳಿದುಕೊಂಡರು. [7]"ಮನುಷ್ಯ ಕುಮಾರನ ಮೇಲೆ ದೇವ ದೂತರು ಏರಿ ಹೋಗುತ್ತಾ ಇಳಿದು ಬರುತ್ತಾ" (ವಚನ 51) ಎಂದು ಯೇಸುವಿನ ಬಗ್ಗೆ ಹೇಳಿದ ಅಂತರಾರ್ಥದ ವಾಕ್ಯವಾಗಿದೆ. ಇದು ಹಳೆ ಒಡಂಬಡಿಕೆಯಲ್ಲಿರುವ ಯಾಕೋಬನ ಏಣಿಯ ಉತ್ತಾರ್ಥದ ಮೇಲೆ ಆಧಾರ ಹೊಂದಿದೆ (ಆದಿಕಾಂಡ 28:12). ಆತನ ಮರಣ, ಸಮಾಧಿ, ಪುನರುತ್ಥಾನದ ಮೂಲಕ ಪರಲೋಕವನ್ನು ಸಾರುವುದಕ್ಕೆ ಕ್ರಿಸ್ತನು ದೇವಲಿಂದ ಕಳುಹಿಸಲ್ಪಟ್ಟ "ಏಣಿ" ಆಗಿದ್ದಾನೆ. [8]ನತಾನಯೇಲನಂತೆ ಅಷ್ಟು ಅಧಿಕವಾಗಿ ಮೆಚ್ಚಿಸಲ್ಪಟವನು ಯಾರು ಇಲ್ಲವೆಂದು J. W. McGarvey ಸೂಚಿಸಿದ್ದಾರೆ. (J. W. McGarvey and Philip Y. Pendleton, *The Fourfold Gospel or A Harmony of the Four Gospels* [Cincinnati: Standard Publishing Co., 1914], 111). [9]ಪ್ರತ್ಯೇಕಿಸಲ್ಪಟ್ಟ ಐದು ಜನ ಶಿಷ್ಯರು ಯೋಹಾನನ ಸುವಾರ್ತೆಯಲ್ಲಿ ತಿಳಿಸಲ್ಪಟ್ಟಿದ್ದಾರೆ ಯೋಹಾನ 1:35-51 ನಾಲ್ಕು ಜನ ಶಿಷ್ಯರ ಹೆಸರನ್ನು ಒಬ್ಬನ ಹೆಸರು ಹೇಳದಂತೆ - ಇತನೇ ಈ ರಚನೆಯ ಲೇಖಕನಾಗಿಬಹುದು. [10]ಶಿಷ್ಯರಾಗಿರಬೇಕು ಎನ್ನುವವರನ್ನು ಕುಲಿತು ನಿರಂತರವಾಗಿ ಮಾತನಾಡಿದನು (ಲೂಕ 14:26, 27, 33; ಯೋಹಾನ 15:8). ಸಭೆಯ ಪ್ರಾರಂಭದಿನದ ನಂತರ, ಸಭೆ ಸದಸ್ಯರಿಗೆ ಉಪಯೋಗಿಸಲ್ಪಟ್ಟ ಸಾಮಾನ್ಯವಾದ ಪದ "ಶಿಷ್ಯರು" ಅನ್ನುವುದು (ಅಪೊಸ್ತಲರ ಕೃತ್ಯಗಳು 6:1, 2, 7; 9:1).

[11]ಕಾನಾ ಊರು ನಜರೇತಿಗೆ ನಾಲ್ಕು ಮೈಲಿ ದೂರ ಇರಬಹುದು. ನಜರೇತಿಗೆ ಹತ್ತು ಮತ್ತು ಹನ್ನೆರಡು ಮೈಲು ದೂರದಲ್ಲಿದೆ ಎಂದು ಕೆಲವು ಪಂಡಿತರು ಭಾವಿಸುತ್ತಾರೆ. ಭೂಪಟವನ್ನು ನೋಡಿ. [12]ಶಿಲುಬೆಯ ಮೇಲೆ ಕ್ರಿಸ್ತನವನ್ನು ಸೂಚಿಸುವ "ನನ್ನ ಗಳಿಗೆ" ಎನ್ನುವುದು ಯೋಹಾನನ ಸುವಾರ್ತೆಯಲ್ಲಿ ನಿರಂತರವಾಗಿ ಕಾಣಿಸುತ್ತದೆ (2:4; 4:21, 23; 5:25, 28; 7:30; 8:20; 12:23, 27; 13:1ರಲ್ಲಿ ನೋಡಿ). ಈ ಅದ್ಬುತಗಳು ತನ್ನ ಶತ್ರುಗಳ ವಿನಹ ಜೀಳುತ್ತದೆ ಎಂದು ಆತನಿಗೆ ಗೊತ್ತು. [13]ನಾನು ಜೀವಿಸುವ ಪ್ರಾಂತ್ಯದಲ್ಲಿ ಒಬ್ಬ ತಾಯಿಯನ್ನು "ಸ್ತ್ರೀ" ಎಂದು ಸಂಭೋದಿಸುವುದು ಅಗೌರವವಾಗಿದೆ. ಎನ್ನುವದು ಅಗೌರವವಿರಬಹುದು. [14]Ernest O. Hauser, "Mary, Mother of Christ," *Reader's Digest* (December 1971): 171. [15]ಆಚಾರ ಸಂಬಂಧಾದ ಬಾನೆಕ್ಕಾಗಿ ಆರು ಬ್ಯಾರಲ್ ಅಲ್ಲಿನ (ಮಾರ್ಕ 7:3) ಇಪ್ಪತ್ತರಿಂದ ಮುವತ್ತು ಅಳತೆಯದು. ಅವು ಅಂಚಿನವರೆಗೆ ತುಂಬಿಕೊಂಡಿವೆ (ಯೋಹಾನ 2:7). (75 ಲಿಂದ 115 ಲೀಟರ್‌ನ ಬಾನೆಗಳು.) [16]ಪ್ರತಿ ದ್ರಾಕ್ಷರಸದ ಬಾನೆ ಆರುನೀರಿನ ಪಾತ್ರೆಗಳಾಗಿ ತುಂಬಿಸಿದ್ದರು. [17]ಆ ದ್ರಾಕ್ಷರಸಕ್ಕೆ ಮಧ್ಯಸಾರದ ಭಾಗ ಇದೆಯೋ ಇಲ್ಲವೋ ತಿಳಿಯದಾದರೂ 10ನೇ ವಚನದಲ್ಲಿ ನಿರಂತರವಾಗಿ ಎತ್ತಿ ತೋಲಿಸಿದ ಮಾತುಗಳು ನಿಜವಾದವುಗಳು. [18]ಈ ಪದವು Septuagint ಗ್ರೀಕ್ ಭಾಷಾಂತರದಲ್ಲಿ ಇರುತ್ತದೆ. [19]ಈ ಸಂಚಿಕೆಯಲ್ಲಿನ "ಹತ್ತರದಲ್ಲಿ ಇದೆ" ಎನ್ನುವ ಪಾಠವನ್ನು ನೋಡಿ. [20]ಪಾಲೇಸ್ತೇನ್ ಭೂಪಟವನ್ನು ನೋಡಿಲಿ.

[21]ನಂತರದ ಕಾಲದಲ್ಲಿ ಪೇತ್ರ, ಅಂದ್ರೆಯನು ಕಪೆರ್ನೌಮಿಗೆ ಹೋಗಿದ್ದರೆಂದು ಕಾಣಿಸುತ್ತದೆ (ಮಾರ್ಕ 1:21, 29). [22]ಪಸ್ಕ ಹಬ್ಬ ಐಗುಪ್ತದಲ್ಲಿನ ಇಸ್ರಾಯೇಲ್ಯರ ಮನೆಯ ನಿಲುವು ಕಂಬಗಳಿಗೂ ಮೇಲಿನ ಪಟ್ಟಿಗಳಿಗೆ ಹಟ್ಟಿದ (ಬಾಗಿಲುಗಳಿಗೆ) ರಕ್ತದ ಗುರುತನ್ನು ನೋಡಿ ಸಂಹಾರಕರನು ದಾಟಿಹೋಗುವುದನ್ನು ಸೂಚಿಸುತ್ತದೆ (ವಿಮೋಚನಕಾಂಡ 12:1-28). ಹಬ್ಬದ ಪಟ್ಟಿಯನ್ನು ನೋಡಿ. [23]ಯೋಹಾನನ ಸುವಾರ್ತೆಯಲ್ಲಿ ಪ್ರಸ್ತಾಪಿಸಲ್ಪಟ್ಟ "ಪಸ್ಕ ಹಬ್ಬಗಳ ಪ್ರಮುಖ್ಯತೆಯೇನು?" ಎಂಬ ಪಾಠವನ್ನು ನೋಡಿ. [24]ಇದನ್ನು ಯೇಸುವಿನ ಸೇವೆಯ ಕಡೇಯ ವಾರದಲ್ಲಿ "ದೇವಾಲಯವನ್ನು ಶುದ್ಧಿಕಲಿಸಿದನೆಂದು" ಭರಮೆ ಪಡಬಾರದು (ಮತ್ತಾಯ 21:12, 13). [25]ಮತ್ತಾಯ 17:24-27ಯನ್ನು

ಕುರಿತದ್ದು. ಇದನ್ನು ಯೆಹೂದ್ಯರ ಮತನಾಯಕರು ವಿಮೋಚನಕಾಂಡ 30:13 ಅನ್ನು ಆಧಾರ ಮಾಡಿಕೊಂಡಿರಬಹುದು. [26]"ಯೆಹೂದ್ಯರ ಹಬ್ಬಗಳು" ಎನ್ನುವ ಪಟ್ಟಿಯನ್ನು ನೋಡಿರಿ. [27]ದೇವಾಲಯಕ್ಕೆ ಗ್ರೀಕ್‌ನ ಎರಡು ಹೆಸರುಗಳಿವೆ ಒಂದು (*ನವೋಸ್*) ದೇವಾಲಯದ ಪರಿಶುದ್ಧ ಭಾಗವನ್ನು ಮತ್ತೊಂದು (*ಹೆರನ್*) ಅನ್ಯ ಜನರ ಹೊರಾಂಗಣದ ಜೊತೆ ದೇವಾಲಯದ ಸಮಾಪ್ತಿ ಭಾಗಗಳನ್ನು ಸೂಚಿಸುತ್ತದೆ. ದೇವಾಲಯದ ಮೇಲೆ ಹೆಚ್ಚಿನ ಸಮಾಚಾರಕ್ಕೆ ಕಾರ್ಯ ಗ್ರಂಥ ಭಾಗ ಒಂದರಲ್ಲಿ ನೋಡಿರಿ. [28]ದೇವಾಲಯ ಎಂದು ಇಲ್ಲಿ ಭಾಷಾಂತರ ಮಾಡಿದ್ದು ಗ್ರೀಕ್ (*ನವೋಸ್*). [29]ನಾಲವತ್ತು ಆರು ವರ್ಷಗಳನ್ನು ಸೂಚಿಸುವ ಲೆಕ್ಕಕ್ಕೆ "ಕ್ರಿಸ್ತನು ಜನ್ಮಿಸಿದ್ದು ಯಾವಾಗ" ಅನ್ನುವ ಪಾಠವನ್ನು ನೋಡಿ. [30]ಆತನು ಪ್ರವಚನ ರೂಪವಾಗಿ ಹೇಳಿದ್ದನು ಕ್ರಿಸ್ತನು ನ್ಯಾಯ ತೀರಿಸುವ ಸ್ಥಳಕ್ಕೆ ಕರೆದುಕೊಂಡಕೊಂಡ ಬಂದರು (ಮಾರ್ಕ 14:58).

[31]ಈ ಸಮಯದಲ್ಲಿ ಯೇಸು ದೆವ್ವಗಳನ್ನು ಹೊರಡಿಸಿದ ವಚನಗಳು ಇಲ್ಲಿ ಇದಕ್ಕೆ ಸಂಬಂಧಿಸಿದ ದಾಖಲೆ ಮಾಡಲ್ಪಟ್ಟಿದ್ದು ಮಾರ್ಕ 1:23-28; ಲೂಕ 4:33-37. ಆ ಸಂದರ್ಭದಲ್ಲಿ ಸದಸ್ಯನಾದನೆಂದು ತೋರುತ್ತದೆ. [32]ನಿಕೋದೇಮನು ಕರ್ತನನ್ನು ಸಂದರ್ಶಿಸಿದ್ದು ಒಂದೇ ಸಾರಿ ಆಗಿರಬಹುದು (ಯೋಹಾನ 7:45-52ನ್ನು ನೋಡಿರಿ). [33]ಈ ಸಮಯದಲ್ಲಿ ಮಾತ್ರ ನಿಕೋದೇಮನು ಯೇಸುವನ್ನು ಸಂಧಿಸಿದ್ದನು. [34]"ರಬ್ಬಿ" ಅನ್ನುವುದು ಕರ್ತನಿಗೆ ನಿಕೋದೇಮನು ಉಪಯೋಗಿಸಿದ ಗೌರವ ಪದ ಎಂದು ಹೇಳಿದನು. [35]KJV ಯಲ್ಲಿ, "ನಿಶ್ಚಯವಾಗಿ ಹೇಳುತ್ತಿದ್ದೇನೆ" ಗ್ರೀಕ್ ಪದದಲ್ಲಿ "ಆಮೇನ್" ಎಂದು ಭಾಷಾಂತರಿಸಲಾಗಿದೆ. ನಾನು ಹೇಳಿದ್ದು "ಸತ್ಯ" ಎನ್ನುವ ಭಾವಕೊಡುತ್ತದೆ! [36]"ಹೊಸಜನ್ಮ" ಕ್ರಿಸ್ತನ ಮಾತಿನಲ್ಲಿ ಕ್ರೈಸ್ತನಾಗುವುದು ಅನ್ನುವ ಷರತ್ತುಗಳಲ್ಲಿ ಗುಪ್ತವಾ ದದ್ದು. ವಿಶ್ವಾಸವು ಅನೇಕ ಸಾರಿ ಪ್ರಸಾದಿಸಲ್ಪಟ್ಟಿದೆ (ವಚನಗಳು 15, 16). ನೀರಿನಿಂದ ಜನ್ಮಿಸುವುದು ಎನ್ನುವುದು ದೀಕ್ಷಾಸ್ನಾನ ಎಂದು ಅನೇಕರು ಒಪ್ಪಿಕೊಳ್ಳುತ್ತಾರೆ (ವಚನ 5). ಆದರೆ ಯೇಸುವಿನ ರಾಜ್ಯಸ್ವಭಾವದ ಮೇಲಾಗಲಿ, ಈ ಷರತ್ತಿನ ಮೇಲೆ ಅಲ್ಲಿ. [37]ನಂತರ ಪೇತ್ರನು ಕ್ರೈಸ್ತರಿಗೆ ತಿಳಿಸುತ್ತಾ, ಅವರು ಹೊಸ ಒಡಂಬಡಿಕೆಯ ಆಜ್ಞೆಗಳಿಗೆ ಒಳಗಾದಾಗ ಹೊಸದಾಗಿ ಜನ್ಮಿಸಿದರು ಎಂದು ಹೇಳಿದ್ದಾನೆ (1 ಪೇತ್ರ 1:22, 23 ನೋಡಿರಿ). [38]ಆತ್ಮಕ್ಕೆ, ಗಾಳಿಗೆ ಒಂದೇ ಗ್ರೀಕ್ ಪದ. ನಾವು ಗಾಳಿಯನ್ನು ನೋಡಲಾಗುವುದಿಲ್ಲ. ಅದರ ಶಬ್ದವನ್ನು ಕೇಳುತ್ತೇವೆ - ಅದರ ಇರುವಿಕೆಯ ಒಂದು ಫಲವನ್ನು (ಗುರುತನ್ನು) ತಿಳಿದುಕೊಳ್ಳುತ್ತೇವೆ. ಅದರಂತೆಯೇ ಆತ್ಮದ ಕಾರ್ಯ ಸಹ. [39]ಅವುಗಳನ್ನು ಕರ್ತನು ಮಾತುಗಳಾಗಿ ತೆಗೆದುಕೊಳ್ಳುವುದೇ ಸರಿಯಾದ ವಿಧಾನ NASB ಅದೇ ಕೆಲಸ ಮಾಡುತ್ತದೆ. [40]ತನ್ನ ಸೇವೆಯಲ್ಲಿ, ನಂತರ ಯೇಸು ಯೆಹೋದ್ಯದಲ್ಲಿ ಸುಮಾರು ಮೂರು ತಿಂಗಳು ಉಪದೇಶಿಸುತ್ತಾನೆ.

[41]ಈ ದೀಕ್ಷಾಸ್ನಾನವುಯೋಹಾನ ದೀಕ್ಷಾಸ್ನಾನವನ್ನು ಮುಂದುವರೆಸುವುದು ಅಂತಹದ್ದು ಆದ್ದರಿಂದ ಇದ ಸಹ ಸಿದ್ಧವಾದ ದೀಕ್ಷಾಸ್ನಾನ ಆಗಿರಬಹುದು. [42]ನಿಕೋದೇಮನೊಂದಿಗೆ ಕರ್ತನು ಮಾಡಿದ ಸಂಭಾಷಣೆಯಲ್ಲಿ ಮಾತನಾಡಿದವರ ಮಾತುಗಳು ಎಲ್ಲಿ ಕೊನೆಯಾಗಿ, NASBಯಲ್ಲಿ, ಸುವಾರ್ತಿಕನ ಮಾತುಗಳು ಎಲ್ಲಿ ಆರಂಭವಾಗುತ್ತದೆಯೋ ತಿಳಿಯದು. [43]KJVಯಲ್ಲಿ, "ವಿಶ್ವಾಸಿಸುತ್ತೇನೆ" ಎನ್ನುವ ಪದ ಈ ವಚನದಲ್ಲಿ ಗ್ರೀಕ್ ಭಾಷೆಯಲ್ಲಿ ಎರಡು ಸಾರಿ ಕಾಣಿಸುತ್ತದೆ.